JANUARY 02, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಪ್ರಾದೇಶಿಕ ಅಸಮತೋಲನ ನಿವಾರಣೆ; ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸಾಧನೆ ಅಧ್ಯಯನಕ್ಕೆ, ಗೋವಿಂದರಾವ್ ಸಮಿತಿ, ರಚನೆ.
- ಬೆಂಗಳೂರಿನ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರದಿಂದ, ವಿಶೇಷ ಒಪ್ಪಂದಕ್ಕೆ ಸಹಿ.
- ಉಡುಪಿ ಜಿಲ್ಲೆಯ, ಕೃಷಿ ಸಖಿ ಸುಗಂಧಿ ನಾಯ್ಕ್‌ಗೆ, ಹೊಸ ದಿಲ್ಲಿಯ ಗಣರಾಜ್ಯೋತ್ಸವಕ್ಕೆ ವಿಶೇಷ ಆಹ್ವಾನ.
- ಗದಗ ಜಿಲ್ಲೆ, ಮಾಗಡಿ ಕೆರೆಗೆ, ಯುರೋಪ್ ಹಾಗೂ ಮಂಗೋಲಿಯಾದಿಂದ ವಲಸೆ ಹಕ್ಕಿಗಳ ಆಗಮನ.

<><><>

ಈಗ ವಾರ್ತೆಗಳ ವಿವರ

<><><>

35 ಸಾವಿರ ಕೋಟಿ ರೂಪಾಯಿ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಖರ್ಚು ಮಾಡಿದ್ದು, ಡಿ.ಎಂ. ನಂಜುಂಡಪ್ಪ ಅವರ, ಪ್ರಾದೇಶಿಕ ಅಸಮತೋಲನ ನಿವಾರಣೆ ವರದಿ ಪ್ರಕಾರ, ಎಷ್ಟು ಅಭಿವೃದ್ಧಿ ಸಾಧನೆಯಾಗಿದೆ ಎಂಬುದರ ಅಧ್ಯಯನಕ್ಕೆ, ಗೋವಿಂದರಾವ್ ನೇತೃತ್ವದ ಸಮಿತಿ ರಚಿಸಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಹಿರಿಯ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿಗೆ ಹೊಸ ವರ್ಷದ ಶುಭ ಕೋರಿ ಅವರು, ಮಾತನಾಡಿದರು. ಉತ್ತರ ಕರ್ನಾಟಕ ಭಾಗದ ಅಸಮಾನತೆ ಇನ್ನೂ ವರೆಗೆ ಕಡಿಮೆಯಾಗಿಲ್ಲ ಎಂಬ ಬಗ್ಗೆಯೂ, ಬೆಳಗಾವಿ ಅಧಿವೇಶನದಲ್ಲಿ ಚರ್ಚೆ ನಡೆಸಲಾಗಿದೆ. ಸರ್ಕಾರ ಇದನ್ನು ಗಂಭೀರವಾಗಿ

ಪರಿಗಣಿಸಿದೆ. ತಾವೂ ಗಂಭೀರವಾಗಿ ಪರಿಗಣಿಸಿ, ಪ್ರಾದೇಶಿಕ ಅಸಮತೋಲನ ತೊಡೆದು ಹಾಕಲು ಶ್ರಮಿಸಬೇಕು ಎಂದರು.

<><><>

ರಾಜ್ಯದ ಜನರ ಆರ್ಥಿಕ ಸಬಲತೆ ಹೆಚ್ಚಿಸಲು, ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ, ಪ್ರಾದೇಶಿಕ ಅಸಮತೋಲನ, ಅಸಮಾನತೆ ತೊಡೆಯಲು ಅಧಿಕಾರಿಗಳ ಸಹಕಾರ ಬೇಕು ಎಂದು ಮುಖ್ಯಮಂತ್ರಿ ನುಡಿದರು.

<><><>

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಅತೀಕ್ ಅಹ್ಮದ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಸೇರಿದಂತೆ, ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

'ಪ್ರಧಾನಮಂತ್ರಿ ಫಸಲ್ ಬಿಮಾ' ಮತ್ತು ಹವಾಮಾನ ಆಧರಿಸಿದ ಬೆಳೆ ವಿಮೆ ಯೋಜನೆಯನ್ನು 2026ರ ವರೆಗೆ ವಿಸ್ತರಿಸಲು, ಕೇಂದ್ರ ಸಚಿವ ಸಂಪುಟ, ಒಪ್ಪಿಗೆ ಸೂಚಿಸಿದೆ. ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹೊಸ ದಿಲ್ಲಿಯಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದರು. ಹೊಸ ವರ್ಷದ ಮೊದಲ ಕೇಂದ್ರ ಸಚಿವ ಸಂಪುಟ ಸಭೆಯನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ರೈತರಿಗೆ ಸಮರ್ಪಿಸಿದ್ದಾರೆ, ಎಂದರು. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ 3ನೇ ಅತೀ ದೊಡ್ಡ ಯೋಜನೆಯಾಗಿದೆ. ಫಸಲ್ ಬಿಮಾ ಯೋಜನೆ ಅನುದಾನವನ್ನು, 69 ಸಾವಿರದ 515 ಕೋಟಿ ರೂಪಾಯಿಗೆ ಏರಿಸಲಾಗಿದೆ. ಈ ನಿರ್ಧಾರದಿಂದ ನಾಲ್ಕು ಕೋಟಿ ರೈತರಿಗೆ ಪ್ರಯೋಜನವಾಗಲಿದೆ. ಈ ಯೋಜನೆಯಡಿ, ಕಳೆದ 8 ವರ್ಷಗಳಲ್ಲಿ, 70 ಸಾವಿರ ಕೋಟಿ ರೂಪಾಯಿ ವಿಮಾ ಮೊತ್ತ ಪಾವತಿಸಲಾಗಿದೆ, ಎಂದರು.

<><><>

ರಾಜ್ಯದ ಸಾವಿರದ 4 ನೂರಾ 60, ರೈತ ಉತ್ಪಾದಕರ ಸಂಸ್ಥೆ ಎಫ್.ಪಿ.ಓ.ಗಳನ್ನು ಸಬಲೀಕರಿಸಲು, ಬೆಂಗಳೂರಿನ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರ, ಮಹತ್ವದ ಹೆಜ್ಜೆಯನ್ನಿರಿಸಿದೆ. ರಾಜ್ಯ ಸರ್ಕಾರ ಮತ್ತು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದಲ್ಲಿ, ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಸಹ್ಯಾದ್ರಿ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ ಮತ್ತು ಸಹ್ಯಾದ್ರಿ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನದೊಂದಿಗೆ, ತ್ರಿ ಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಸಾಮರ್ಥ್ಯ ವೃದ್ಧಿ ಮತ್ತು ಕ್ಷೇತ್ರ ಪ್ರವಾಸಗಳ ಮೂಲಕ, ಎಫ್.ಪಿ.ಓ ಗಳ ಸುಸ್ಥಿರತೆ ಖಾತ್ರಿ ಪಡಿಸುವುದು, ಈ ಒಪ್ಪಂದದ ಪ್ರಮುಖ ಗುರಿಯಾಗಿದೆ.

<><><>

2024–25ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ. ಗೂಗಲ್ ಪ್ಲೇ ಸ್ಟೋರ್‌ನಿಂದ, "ಹಿಂಗಾರು ರೈತರ ಬೆಳೆ ಸಮೀಕ್ಷೆ 2024"ನ್ನು ಡೌನ್ಲೋಡ್ ಮಾಡಿಕೊಂಡು, ರೈತರು ಖುದ್ದಾಗಿ, ಬೆಳೆ ವಿವರಗಳನ್ನು ದಾಖಲಿಸುವಂತೆ, ಕೃಷಿ ಇಲಾಖೆ ರೈತರಲ್ಲಿ ಮನವಿ ಮಾಡಿದೆ. ಬೆಳೆಯ ವಿವರಗಳನ್ನು ರೈತರು ದಾಖಲಿಸಿ, ಕನಿಷ್ಟ ಬೆಂಬಲ ಬೆಲೆ, ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಪಹಣಿಯಲ್ಲಿ ಬೆಳೆ ವಿವರ ದಾಖಲೆ ಮತ್ತು ಬೆಳೆ ಸಾಲ ಪಡೆಯಲು, ಅನುಕೂಲವಾಗುತ್ತದೆ. ಹೆಚ್ಚಿನ ಮಾಹಿತಿಗೆ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಲು ರೈತರನ್ನು ಕೋರಲಾಗಿದೆ.

<><><>

ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು, ಶಿವಪುರ ಗ್ರಾಮದ ಕೃಷಿ ಸಖಿ ಸುಗಂಧಿ ನಾಯ್ಕ್ ಅವರು, 26ನೇ ತಾರೀಖು, ಹೊಸ ದಿಲ್ಲಿಯಲ್ಲಿ ಆಯೋಜಿತ, ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿದ್ದಾರೆ. ರಾಜ್ಯದಿಂದ ಆಯ್ಕೆಯಾದ ಒಟ್ಟು 12 ಜನ ಕೃಷಿ ಸಖಿಯರಲ್ಲಿ ಸುಗಂಧಿ ಸಹ ಒಬ್ಬರಾಗಿದ್ದಾರೆ. ಸಂಜೀವಿನಿ ಮಹಿಳಾ ಒಕ್ಕೂಟದ ಮೂಲಕ, ಅಡಕೆ ಹಾಳೆಯಿಂದ ಊಟದ ತಟ್ಟೆ ತಯಾರಿಸುವ ಘಟಕವನ್ನು ಆರಂಭಿಸಿ, ಹಲವು ಮಹಿಳೆಯರಿಗೆ ಉದ್ಯೋಗ ಸಹ ಅವರು ನೀಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಸುಗಂಧಿ ನಾಯ್ಕ್ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಗದಗ ಜಿಲ್ಲೆ, ಶಿರಹಟ್ಟಿ ತಾಲೂಕು, ಮಗದದ ಕೆರೆಯಲ್ಲಿ, ಯುರೋಪ್ ಹಾಗೂ ಮಂಗೋಲಿಯಾದಿಂದ ಚಳಿಗಾಲ ಕಳೆಯಲು, ಹಲವು ಹಕ್ಕಿಗಳು ವಲಸೆ ಬಂದಿವೆ. 137 ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ, ಮಾಗಡಿ ಕೆರೆ ಸಂರಕ್ಷಣಾ ಮೀಸಲು ಪ್ರದೇಶವಾಗಿದ್ದು, ರಾಮ್‌ಸಾರ್ ಜೌಗುತಾಣವಾಗಿ ಮನ್ನಣೆ ಪಡೆದಿದೆ. ಗದಗ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್‌ಕುಮಾರ ಕೆಂಚಮ್ಮನವರ, ಮಾಗಡಿಗೆ ಭೇಟಿ ನೀಡುವಂತೆ, ಕೋರಿದ್ದಾರೆ.

<><><>

ಸಂತೋಷ್‌ಕುಮಾರ ಕೆಂಚಮ್ಮನವರ ಧ್ವನಿ 18 ಸೆಕೆಂದುಗಳು

<><><>

ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ, ಮಾಗಡಿಯನ್ನು ಪ್ರವಾಸಿ ತಾಣಗಳ ನಕ್ಷೆಯಲ್ಲಿ ವಿಶೇಷವಾಗಿ ಗುರುತಿಸಲು, ಯೋಜನೆ ರೂಪಿಸಲಾಗಿದೆ ಎಂದಿದ್ದಾರೆ.

<><><>

ಎಚ್.ಕೆ.ಪಾಟೀಲ ಧ್ವನಿ 15 ಸೆಕೆಂದುಗಳು

<><><>

ಮೈಸೂರಿನ ಹೆಬ್ಬಾಳದ, ಇನ್ಫೋಸಿಸ್ ಆವರಣದಲ್ಲಿ, ಚಿರತೆ ಕಾಣಿಸಿಕೊಂಡಿದ್ದು, ಅರಣ್ಯ ಇಲಾಖೆ ಸಿಬ್ಬಂದಿ, ಚಿರತೆಯನ್ನು ಸೆರೆ ಹಿಡಿಯಲು, ಕಾರ್ಯಾಚರಣೆ ಮುಂದುವರೆಸಿದ್ದಾರೆ. ಕ್ಯಾಂಪಸ್‌ನಲ್ಲಿ ಚಿರತೆ ಓಡಾಟದ ಹಿನ್ನೆಲೆ, ಸುರಕ್ಷತೆ ದೃಷ್ಟಿಯಿಂದ, ಇನ್ಫೋಸಿಸ್ ಸಂಸ್ಥೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದು, ತನ್ನ ಸಿಬ್ಬಂದಿಗೆ, ಮನೆಯಿಂದಲೇ ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದೆ. ಒಟ್ಟು 377 ಎಕರೆ ಪ್ರದೇಶದ ಕ್ಯಾಂಪಸ್‌ನಲ್ಲಿ ಅರಣ್ಯಾಧಿಕಾರಿಗಳು, ಕ್ಯಾಮೆರಾ ಅಳವಡಿಸಿ, ಬೋನ್ ಇರಿಸಿ, ಚಿರತೆ ಸೆರೆಗೆ ಮುಂದಾಗಿದ್ದಾರೆ.

<><><>

ಈ ಮಧ್ಯೆ, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ಮಲೇಷ್ಯಾದಿಂದ ಕಳ್ಳಸಾಗಣೆ ಮಾಡಲಾದ, ಅಳಿವಿನಂಚಿನ 379 ವನ್ಯಜೀವಿಗಳನ್ನು ಕಸ್ಟಮ್ಸ್ ಅಧಿಕಾರಿಗಳು ರಕ್ಷಿಸಿದ್ದಾರೆ.

<><><>

ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ, ಸಾಧನೆಗೈದ ಪತ್ರಕರ್ತರಿಗೆ ನೀಡುವ, 2017 ರಿಂದ 2023ರ ಪ್ರಶಸ್ತಿಗಳನ್ನು ಪ್ರಕಟಿಸಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆಯುಕ್ತ ಹೇಮಂತ ನಿಂಬಾಳ್ಕರ್ ಮಾಹಿತಿ ನೀಡಿದ್ದಾರೆ. ಕೋವಿಡ್ ಹಾಗೂ ಇತರೆ ಕಾರಣಗಳಿಂದ ವಿಳಂಬವಾಗಿದ್ದ, 2017 ರಿಂದ 2023ರ ವರೆಗಿನ ಏಳು ವರ್ಷಗಳ ಅವಧಿಯ ಪ್ರಶಸ್ತಿಗಳಿಗೆ, ಅರ್ಹ ಪತ್ರಕರ್ತರನ್ನು, ಹಿರಿಯ ಪತ್ರಕರ್ತರಾದ ಸನತ್ ಕುಮಾರ್ ಬೆಳಗಲಿ ಹಾಗೂ ಕೆ.ಶಿವಕುಮಾರ್ ಅವರಿದ್ದ ಸಮಿತಿ ಆಯ್ಕೆ ಮಾಡಿದೆ. ಪ್ರಶಸ್ತಿ ತಲಾ ಒಂದು ಲಕ್ಷ ರೂಪಾಯಿ ನಗದು, ಸ್ಮರಣಿಕೆ, ಅಭಿನಂದನಾ ಪತ್ರ ಒಳಗೊಂಡಿದೆ.

<><><>

ಭಾರತೀಯ ವೈದ್ಯಕೀಯ ಸಂಸ್ಥೆ, ಶಿವಮೊಗ್ಗ ಶಾಖೆಯ, 75ನೇ ವರ್ಷದ ಅಮೃತ ಮಹೋತ್ಸವ ವರ್ಷಾಚರಣೆ ಹಾಗೂ ಆಕಾಶವಾಣಿ ಭದ್ರಾವತಿ ಕೇಂದ್ರದ, 60ನೇ ವರ್ಷದ ವಜ್ರ ಮಹೋತ್ಸವದ ಹಿನ್ನೆಲೆ, ಭದ್ರಾವತಿ ಆಕಾಶವಾಣಿ ಕೇಂದ್ರದಲ್ಲಿ, "ಆರೋಗ್ಯ ಸಲಹೆ" ವಿಶೇಷ ಮಾಲಿಕೆಗೆ, ಶಾಖೆಯ ಅಧ್ಯಕ್ಷ ಡಾಕ್ಟರ್ ಎಸ್. ಶ್ರೀಧರ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, 500ಕ್ಕೂ ಹೆಚ್ಚು ತಜ್ಞ ವೈದ್ಯರ ಸದಸ್ಯತ್ವ ಹೊಂದಿರುವ, ಐ.ಎಂ.ಎ. ಶಿವಮೊಗ್ಗ ಘಟಕ, ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ, ಈ ತಿಂಗಳ 18 ರಂದು ಚಾಲನೆ ನೀಡಲಿದೆ ಎಂದರು.

<><><>

ತುಮಕೂರಿನ ಶ್ರೀ ಸಿದ್ಧಗಂಗಾ ಮಠದ, ಪದ್ಮ ಭೂಷಣ, ಶ್ರೀ ಶಿವಕುಮಾರ ಸ್ವಾಮೀಜಿಯವರ, 6ನೇ ವರ್ಷದ ಪುಣ್ಯಸ್ಮರಣೆ ನಿಮಿತ್ತ, 'ಸಿದ್ಧಗಂಗಾ ಶ್ರೀ' ಪುರಸ್ಕಾರವನ್ನು, 21ನೇ ತಾರೀಖು ನಾಡೋಜ ಗೊ.ರು. ಚನ್ನಬಸಪ್ಪ ಅವರಿಗೆ ಪ್ರದಾನ ಮಾಡಲಾಗುತ್ತಿದೆ. ಪ್ರಶಸ್ತಿ 1 ಲಕ್ಷ ರೂಪಾಯಿ ನಗದು, ಅಭಿನಂದನಾ ಪತ್ರ ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

<><><>

ಪುಣೆ–ಬೆಳಗಾವಿ–ಹುಬ್ಬಳ್ಳಿ, ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು, ಘಟಪ್ರಭಾ ರೈಲು ನಿಲ್ದಾಣದಲ್ಲಿ ಇಂದಿನಿಂದ ಸಂಜೆ 7:20ಕ್ಕೆ ನಿಲುಗಡೆಯಾಗಲಿದೆ ಎಂದು, ಬೆಳಗಾವಿ ಸಂಸದ ಜಗದೀಶ ಶೆಟ್ಟರ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಕೇಂದ್ರ ರೇಲ್ವೆ ಖಾತೆ ಸಚಿವ, ಅಶ್ವಿನಿ ವೈಷ್ಣವ್, ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರಿಗೆ ಸಂಸದ ಶೆಟ್ಟರ್ ಕೃತಜ್ಞತೆ ಸೂಚಿಸಿದ್ದಾರೆ.

<><><>

ಜಮ್ಮು, ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ, ಸೇನಾ ವಾಹನ ಕಂದಕಕ್ಕೆ ಉರುಳಿ ಮೃತಪಟ್ಟ, ಸೈನಿಕ ಪಿ.ಪಿ.ದಿವಿನ್ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಕೊಡಗು ಜಿಲ್ಲೆಯ ಆಲೂರು ಸಿದ್ದಾಪುರದ, ಮಾಲಂಬಿ ಗ್ರಾಮದಲ್ಲಿ, ಸಕಲ ಸರ್ಕಾರಿ ಗೌರವಗಳೊಂದಿಗೆ ಜರುಗಿತು.

<><><>

ಬೆಂಗಳೂರು ಮಹಾನಗರ ಪಾಲಿಕೆ, ಪೂರ್ವ ವಲಯ ವ್ಯಾಪ್ತಿಯ, ಮಹಾತ್ಮ ಗಾಂಧಿ ರಸ್ತೆ ಹಾಗೂ ಸುತ್ತಮುತ್ತ, ಹೊಸ ವರ್ಷಾಚರಣೆ ಬಳಿಕ, 15 ಮೆಟ್ರಿಕ್ ಟನ್ ತ್ಯಾಜ್ಯ–ಅನುಪಯುಕ್ತ ವಸ್ತುಗಳನ್ನು, ಸ್ವಚ್ಛತಾ ಸೇನಾನಿಗಳು ಸಂಗ್ರಹಿಸಿ, ಶುಚಿಗೊಳಿಸಿ, ನೈರ್ಮಲ್ಯ ಕಾಪಾಡಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪ್ರಾದೇಶಿಕ ಅಸಮತೋಲನ ನಿವಾರಣೆ; ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸಾಧನೆ ಅಧ್ಯಯನಕ್ಕೆ, ಗೋವಿಂದರಾವ್ ಸಮಿತಿ, ರಚನೆ.

- ಬೆಂಗಳೂರಿನ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರದಿಂದ, ವಿಶೇಷ ಒಪ್ಪಂದಕ್ಕೆ ಸಹಿ.

- ಉಡುಪಿ ಜಿಲ್ಲೆಯ, ಕೃಷಿ ಸಖಿ ಸುಗಂಧಿ ನಾಯ್ಕ್‌ಗೆ, ಹೊಸ ದಿಲ್ಲಿಯ ಗಣರಾಜ್ಯೋತ್ಸವಕ್ಕೆ ವಿಶೇಷ ಆಹ್ವಾನ.

- ಗದಗ ಜಿಲ್ಲೆ, ಮಾಗಡಿ ಕೆರೆಗೆ, ಯುರೋಪ್ ಹಾಗೂ ಮಂಗೋಲಿಯಾದಿಂದ ವಲಸೆ ಹಕ್ಕಿಗಳ ಆಗಮನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>